(SRI KADIDAL MANJAPPA)

Sl. No.	*Name of Village*
29	Basapur
30	Kondikop
31	Saswihalli
32	Majjigudda
33	Nalwadi
34	Manakwad
35	Siswinhalli
36	Dundur
37	Bennur
38	Ballarwad
39	Nagarhalli
40	Jawoor
41	Ballur
42	Belawatgi
43	Navalgund
44	Komargop
45	Karlwad
46	Chilkwad
47	Nagnur
48	Amargol
49	Kadadhalli

NARGUND MAHAL TALUK.

50	Arashingodi
51	Banakankop
52	Chiknargund
53	Kanakikop
54	Kalkeri
55	Banahatti
56	Mugnur
57	Madgunaki
58	Bhairanhatti
59	Gangapur
60	Khanapur
61	Surkod
62	Hunashikatti

RON TALUK.

63	Hiremannur
64	Malwad
65	Mallapur
66	Somankatti
67	Asuti
68	Melamath
69	Koujageri
70	Gujamagadi
71	D. S. Hadagali
72	Yawagal
73	Belawaniki
74	Hullur
75	Kuradigi
76	Megur.

ಶ್ರೀ ಎ. ಜೆ. ದೊಡ್ಡಮೇಟಿ.—ಈ ವಿಚಾರದಲ್ಲಿ ಬೋರ್ಡಿನವರು ಜೂಜ್ ತಿಂಗಳೊಳಗೆ ಕೆಲವು ಯೋಜನೆಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಸಲಹೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

†ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಬಗ್ಗೆ ಡಿ. ಡಿ. ಬಿ. ಯವರನ್ನು ವಿಚಾರ ಮಾಡುತ್ತೀರ?

ಶ್ರೀ ಕಡಿದಾಳ್ ಮಂಜಪ್ಪ.—ಕುಡಿಯುವ ನೀರಿನ ನರಬರಾಜು ಬಗ್ಗೆ ಕೆಲವು ಹಳ್ಳಿಗಳಲ್ಲಿ ತೊಂದರೆ ಇದೆ. ಅದಕ್ಕೋಸ್ಕರ ನೀರನ್ನು ಸಪ್ಲೈಮಾಡುವುದಕ್ಕೆ ಸರ್ಕಾರದವರು 37 ಸಾವಿರ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಬಗ್ಗೆ ಜಿಲ್ಲಾ ಅಭಿವೃದ್ಧಿ ಬೋರ್ಡಿನವರ ರೆಸಲ್ಯೂಷನ್ ಆಗಿದೆ. ಅವರ ಸ್ಕೀಮನ್ನು ವಿಚಾರಮಾಡಬೇಕು ಮತ್ತು ಆ ಬಗ್ಗೆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲೆಲ್ಲಿ ಡೀಸಿಲ್ಟಿಂಗ್ ಸಾಧ್ಯವೋ, ಅಲ್ಲಲ್ಲಿ ಡೀಸಿಲ್ಟಿಂಗ್ ಮಾಡಿಸುತ್ತಾ ಇದೆ.

Supply of water to the channels from Hemavathi river during summer.

*Q.—50. Sri N. G. NARASIMHEGOWDA (Sravanabelagola).—

Will the Government be pleased to state:—

(*a*) whether it is a fact that the ryots and members of the State Legislature have been requesting them since many years to supply water to the channels running from the Hemavati river so as to enable them to raise food crops in the atchkat under these channels during summer also;

(*b*) the reasons for not supplying water to these channels although the agreement between the Government of Mysore and the Government of Madras is to terminate shortly;

† Indicates that the remarks or speeches have not been revised by the member concerned.

(*c*) whether they are aware that the ryots are put to a great loss as a result thereof?

A.—Sri H. M. CHANNABASAPPA (Minister for Public Works and Electricity).—

(*a*) There have been some representations.

(*b*) (1) Inadequate flow in the river during summer months.

(2) Any draw off at the S.D Dam during summer months will affect the supply into K.R.S. from where a discharge of 900 cusecs has to be maintained at Sivasamudram as per the Mysore Madras Agreement.

(*c*) No.

ಶ್ರೀ ಎಚ್. ಜಿ. ನರಸಿಂಹೇಗೌಡ.—ಹಿಂದೆ 10 ವರ್ಷಗಳಿಂದ ಬೇಸಿಗೆ ಕಾಲದಲ್ಲಿ ಆಹಾರಪದಾರ್ಥಗಳನ್ನು ಬೆಳೆಯಲು ನೀರನ್ನು ಕೊಡುತ್ತಾ ಇದ್ದು, ಇತ್ತೀಚೆಗೆ ನಿಲ್ಲಿಸುವುದಕ್ಕೆ ಕಾರಣವೇನು?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ವೇಳೆ ಕೊಟ್ಟಿದ್ದರೆ, ಸೀಸನರ್ ಕಂಡಿಷನ್ಸ್ ಉತ್ತಮವಾಗಿದ್ದು, ಹಳ್ಳದಲ್ಲಿ ಬೇಕಾದಷ್ಟು ನೀರು ಇದ್ದಿರಬಹುದು, ಇದಕ್ಕೆ ಆಗ್ಗೇ ಬಹುಶಃ ಮದ್ರಾಸ್ ಮತ್ತು ಮೈಸೂರು ಸರ್ಕಾರಗಳ ಸಂಬಂಧಕ್ಕೆ ಧಕ್ಕೆ ಬಾರದ ರೀತಿಯಲ್ಲಿ ವ್ಯವಸ್ಥೆ ಮಾಡಿದ್ದರೂ ಮಾಡಿರಬಹುದು.

ಶ್ರೀ ಎಚ್. ಜಿ. ನರಸಿಂಹೇಗೌಡ.—ಈಗಲಾದರೂ ಮದ್ರಾಸ್ ಸರ್ಕಾರಕ್ಕೆ ರೆಫರೆನ್ಸ್‌ಮಾಡಿ ಬೇಸಿಗೆಕಾಲದಲ್ಲಿ ನೀರು ಕೊಡುವುದಕ್ಕೆ ಅವಕಾಶ ಕಲ್ಪಿಸಿಕೊಡುತ್ತೀರ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರೆಫರೆನ್ಸ್ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಮೊದಲು ಕಾಲುವೆಗೆ ನೀರು ಬಿಟ್ಟರೆ ಮುಂದಕ್ಕೆ ಹೋಗುವುದು, ತರೀಜಮೀನಿಗೆ ಹೋಗುವುದು ಎಂದು ನಮ್ಮಮನಸ್ಸಿಗೆ ನಿರ್ಧಾರವಾದರೆ, ಆಗ ಬರೆಯುವ ಪ್ರಶ್ನೆ ಬರುತ್ತದೆ. ನಮಗೆ ನಿರ್ಧಾರವಿಲ್ಲದಿರುವಾಗ, ಪ್ರಯೋಜನವೇನು?

ಶ್ರೀ ಎಚ್. ಜಿ. ನರಸಿಂಹೇಗೌಡ.—ಕೃಷ್ಣಸಾಗರದ ಹಳ್ಳದಲ್ಲಿ ಎಷ್ಟು ನೀರಿದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀರಿಷ್ಟಿದೆ ಎನ್ನುವ ಪ್ರಶ್ನೆಯಿಲ್ಲ. ಶ್ರೀರಾಮದೇವರ ಅಣೆಕಟ್ಟಿನ ಕೆಳಗೆ ಇರತಕ್ಕಂಥ ಅಚ್ಚುಕಟ್ಟಿಗೆ ಮಳೆಗಾಲದಲ್ಲಿ ಮಾತ್ರ ನೀರನ್ನು ಒದಗಿಸತಕ್ಕಂಥ ಯೋಜನೆ ಇದೆ; ಬೇಸಿಗೆ ಕಾಲದಲ್ಲಿ ಒದಗಿಸುವ ಯೋಜನೆ ಇಲ್ಲ. ಶ್ರೀರಾಮದೇವರ ಅಣೆಕಟ್ಟಿನಲ್ಲಿ 4–4½ ಅಡಿ ನೀರು ಹರಿದರೆ ಮಾತ್ರ, ಕಾಲುವೆಯಲ್ಲಿ ನೀರು ಮುಂದಕ್ಕೆ ಹೋಗುತ್ತದೆ. ಅಂಥ ಪರಿಸ್ಥಿತಿ ಬೇಸಿಗೆ ಕಾಲದಲ್ಲಿ ಇರದೆ ಇರುವುದರಿಂದ, ನೀರನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಪುನಃ ಎಕ್ಸಾಮಿನ್‌ಮಾಡಿ ನೀರು ಕೊಡುತ್ತೀರ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಂಪೂರ್ಣವಾಗಿ ಎಕ್ಸಾಮಿನ್‌ಮಾಡಿಯೇ, ಉತ್ತರ ಕೊಡುತ್ತಿರುವುದು.

ಶ್ರೀ ಎಂ. ಕೆ. ಬೊಮ್ಮೇಗೌಡ.—ಕೃಷ್ಣರಾಜಸಾಗರದಿಂದ ಇಂತಿಷ್ಟು ನೀರಿಗಿಂತ ಜಾಸ್ತಿ ತೆಗೆದುಕೊಂಡರೆ, ಮೈಸೂರು ಮದ್ರಾಸ್ ಅಗ್ರಿಮೆಂಟಿಗೆ ಧಕ್ಕೆ ಬರುತ್ತದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಆಗಲೇ ಹೇಳಿದೆ. ಶ್ರೀರಾಮದೇವರ ಅಣೆಕಟ್ಟಿನ ಹಳ್ಳದಲ್ಲಿ ಬೇಸಿಗೆ ಕಾಲದಲ್ಲಿ ಸುಮಾರು 100 ಕ್ಯೂಸೆಕ್ಸ್ ಪ್ರಮಾಣದ ನೀರು ಬರುತ್ತದೆ. ಶ್ರೀರಾಮದೇವರ ಅಣೆಕಟ್ಟೆಯೊಳಗೆ ಇರತಕ್ಕಂಥ ನೀರು ನಾಲೆಗೆ ನುಗ್ಗಬೇಕಾದ ಪಕ್ಷದಲ್ಲಿ ಆದರಲ್ಲಿ ನೀರು ಸುಮಾರು 4–4½ ಅಡಿ ಇರಬೇಕು. ಅಷ್ಟಿದ್ದರೆ ಕಾಲುವೆಯಲ್ಲಿ ನೀರು ಮುಂದಕ್ಕೆ ಹೋಗುತ್ತದೆ. ಹಳ್ಳದಲ್ಲಿ 200–300 ಕ್ಯೂಸೆಕ್ಸ್ ನೀರು ಬರುತ್ತದೆ. ಆದರೆ ಕಾಲುವೆಯಲ್ಲಿಯೇ ನೀರು 600 ಕ್ಯೂಸೆಕ್ಸ್ ಬರಬೇಕಾಗುವುದರಿಂದ, ಪ್ರಯತ್ನ ಮಾಡಿದರೂ, ನೀರು ಹೋಗುವುದು ಕಷ್ಟವಾಗುತ್ತದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಮಳೆಗಾಲದಲ್ಲಿ ಏನಾದರೂ ಅಚ್ಚುಕಟ್ಟು ಇಕ್ರೀಸ್ ಮಾಡುವುದಕ್ಕೆ ಸಾಧ್ಯವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬೇಸಿಗೆ ಕಾಲದಲ್ಲಿ ಸಾಧ್ಯವಿಲ್ಲವೆಂದು ಒಪ್ಪಿಕೊಂಡಿದ್ದಕ್ಕೆ ಬಹಳ ಸಂತೋಷ. ಮಳೆಗಾಲದಲ್ಲಿ ಅಚ್ಚುಕಟ್ಟನ್ನು ಎಷ್ಟರ ಮಟ್ಟಿಗೆ ಹೆಚ್ಚಿಸಬಹುದೆಂಬುದನ್ನು ತೀವ್ರವಾಗಿ ಪರ್ಯಾಲೋಚನೆ ಮಾಡಿ ಸಾಧ್ಯವಾದಷ್ಟು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಕೆ. ಬೊಮ್ಮೇಗೌಡ.— 'ಈಗ ಅಚ್ಚುಕಟ್ಟನ್ನು ಹೆಚ್ಚು ಮಾಡಿದ್ದೀರಿ, ಹೆಚ್ಚು ನೀರನ್ನು ಉಪಯೋಗ ಮಾಡುತ್ತಿದ್ದೀರಿ, ಹೀಗೆ ಉಪಯೋಗ ಮಾಡುವ ಹೆಚ್ಚಿಗೆ ನೀರಿನ ಎರಡರಷ್ಟು ನೀರನ್ನು ನಮಗೆ ಬಿಟ್ಟುಕೊಡಿ' ಎಂದು ಮದರಾಸು ಸರ್ಕಾರದವರೇನಾದರೂ ಕೇಳಿದ್ದಾರೆಯೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೇಳಿಲ್ಲ, ಕೇಳಿದರೂ ಉತ್ತರ ಹೇಳುವುದು ಕಷ್ಟವಿಲ್ಲ. 1924 ನೆಯ ಇಸವಿಯ ಒಪ್ಪಂದಕ್ಕೊಳಪಟ್ಟು ಎಷ್ಟು ಅಚ್ಚುಕಟ್ಟನ್ನು ನಾವು ಮಾಡಿಕೊಳ್ಳಬಹುದೋ ಅಷ್ಟನ್ನು ಮಾಡಲು ಪ್ರಯತ್ನ ಮಾಡುತ್ತೇವೆನ್ನುವುದರಲ್ಲಿ ಅನುಮಾನವಿಲ್ಲ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಹತ್ತು ವರ್ಷಗಳ ಹಿಂದೆ ಬೇಸಗೆಯಲ್ಲಿ ನೀರು ಕೊಡುತ್ತಿದ್ದಾಗ ಶ್ರೀರಾಮದೇವರ ಕಟ್ಟೆಯಲ್ಲಿ ಎಷ್ಟು ನೀರಿರುತ್ತಿತ್ತು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಗ ಕೊಡುತ್ತಿದ್ದರು ಎನ್ನುವ ಪ್ರಶ್ನೆ ಇಲ್ಲ; ಅದು ನನಗೆ ಗೊತ್ತಿಲ್ಲ. ನೀವು ಹೇಳಿದುದರ ಮೇರೆ ಹೇಳಿದೆ, ಅಷ್ಟೆ. ಆಗಿನ ಕಾಲದ ವಿಷಯವನ್ನು ತಿಳಿದು ಪ್ರಯೋಜನವೇನು?

ಶ್ರೀ ಎಚ್. ಜಿ. ನರಸಿಂಹೇಗೌಡ.—ಆಗ ಏನು ಕಾರಣದಿಂದ ಕೊಟ್ಟಿದ್ದರು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಗ ಬೇಸಗೆಯಲ್ಲಿ ನೀರು ಹೆಚ್ಚಾಗಿ ಬರುತ್ತಿದ್ದಿರಬಹುದು. ಆದರೆ ಸದ್ಯದಲ್ಲಿ ಆ ಪರಿಸ್ಥಿತಿ ಇಲ್ಲವೆನ್ನುವುದಕ್ಕೆ ಅನುಮಾನಕ್ಕೆ ಅವಕಾಶವೇ ಇಲ್ಲದ ರೀತಿ ತಿಳಿಸುತ್ತಿದ್ದೇನೆ.

———